https://mail.google.com/mail/u/0/

# ಜೆಎಸ್‌ಎಸ್ ಮಹಾವಿದ್ಯಾಪೀಠ

ಜಗದ್ಗುರು ಡಾ॥ ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು – 570004

ನಂ. ಜೆಎಡಿ/ಇಎಸ್‌ಟಿ(1)/26/2020–21

ದಿನಾಂಕ: 2.2.2021

Office of the Director (Technical Education) JSS Mahavidyapeetha, JSS TI Campus, Mysuru
No. 3827
Date 3/2/21

## ಸುತ್ತೋಲೆ

ವಿಷಯ: ದಿನಾಂಕ 1.2.2020ರ ನಂತರ ಹೊಸದಾಗಿ ನೇಮಕಗೊಂಡಿರುವ ಸಿಬ್ಬಂದಿಗಳಿಗೆ ಗ್ರಾಚ್ಯುಯಿಟಿಗೆ ಸಂಬಂಧಿಸಿದಂತೆ IRDA/LIC ರವರು ನೂತನವಾಗಿ ಜಾರಿಗೊಳಿಸಿರುವ GGS ಯೋಜನೆಗೆ ಸೇರ್ಪಡೆಗೊಳಿಸಲು ಅನುಮತಿ ನೀಡುವುದು

ಉಲ್ಲೇಖ: ವ್ಯವಸ್ಥಾಪಕರು, ಎಲ್‌ಐಸಿ (ಪಿ & ಜಿಎಸ್) ಇವರ ಪತ್ರಸಂಖ್ಯೆ NGGCA/506001033 ದಿನಾಂಕ 19.3.2020.

-*-

ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಎಎಚ್‌ಇ&ಆರ್, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಮತ್ತು ಇದರ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು ಆಡಳಿತಮಂಡಳಿಯಿಂದ ವೇತನ ಪಡೆಯುತ್ತಿರುವ ಸಿಬ್ಬಂದಿ ವರ್ಗದವರುಗಳಿಗೆ ಗ್ರಾಚ್ಯುಯಿಟಿ ಸೌಲಭ್ಯವನ್ನು ನೀಡಿದೆ. ಪ್ರಸ್ತುತ IRDA/LIC ನಿಯಮಾವಳಿ ಮತ್ತು ಮಾರ್ಗಸೂಚಿಯಂತೆ ಈಗ ಚಾಲ್ತಿಯಲ್ಲಿರುವ NGGCA ಗ್ರೂಪ್ ಗ್ರಾಚ್ಯುಯಿಟಿ ಮಾಸ್ಟರ್ ಪಾಲಿಸಿಗೆ ಬದಲಾಗಿ, ನೂತನವಾಗಿ Group Gratuity Saving (GGS) ಯೋಜನೆಯನ್ನು ಜಾರಿಗೊಳಿಸಲಾಗಿದ್ದು, ಈಗ ಚಾಲ್ತಿಯಲ್ಲಿರುವ New Group Gratuity Cash Accumulation (NGGCA) ಯೋಜನೆಯನ್ನು ಸಂಸ್ಥೆಗೆ ಹೊಸದಾಗಿ ನೇಮಕ ಮಾಡಲಾಗುವ ಸಿಬ್ಬಂದಿಗಳನ್ನು ಸೇರ್ಪಡೆಗೊಳಿಸಲು ಅವಕಾಶವಿರುವುದಿಲ್ಲವಾದ್ದರಿಂದ, ಆಡಳಿತಮಂಡಳಿಯು ಈ ಬಗ್ಗೆ ಪರಿಶೀಲಿಸಿ ಈ ಕೆಳಕಂಡಂತೆ ಕ್ರಮವಹಿಸಲು ಸೂಚಿಸಿದೆ.

- ದಿನಾಂಕ 1.2.2020ರ ನಂತರ ಹೊಸದಾಗಿ ನೇಮಕಗೊಂಡಿರುವ ಸಿಬ್ಬಂದಿಗಳಿಗೆ, IRDA/LIC ರವರು ನೂತನವಾಗಿ ಜಾರಿಗೊಳಿಸಿರುವ ನಿಯಮಾವಳಿ ಪ್ರಕಾರ Group Gratuity Saving Scheme (GGS) ಗೆ ಸೇರ್ಪಡೆಗೊಳಿಸಲು ಅನುಮತಿ ನೀಡಿದೆ.
- 1.2.2020ರ ಹಿಂದೆ ನೇಮಕಗೊಂಡಿರುವ ಸಿಬ್ಬಂದಿಗಳಿಗೆ ಚಾಲ್ತಿಯಲ್ಲಿರುವ New Group Gratuity Cash Accumulation (NGGCA) ಯೋಜನೆಯಲ್ಲಿಯೇ ಮುಂದುವರಿಸುವುದು.

ವಿಭಾಗಗಳ ಮುಖ್ಯಸ್ಥರು, ಮೇಲಿನ ಸೂಚನೆಯನ್ನು ವಿಭಾಗಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯ ಮುಖ್ಯಸ್ಥರುಗಳ ಗಮನಕ್ಕೆ ತಂದು, ಮೇಲಿನ ಸೂಚನೆಯನ್ವಯ ಕೂಡಲೇ ಕ್ರಮಕ್ಕೈಗೊಳ್ಳುವಂತೆ ಸೂಚಿಸುವುದು.

2/2/21

ಕಾರ್ಯನಿರ್ವಾಹಕ ಕಾರ್ಯದರ್ಶಿ

ಇವರಿಗೆ,

1. ಅಧ್ಯಕ್ಷರು, ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕಾರ್ಯದರ್ಶಿಗಳು–1, ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು.
3. ಕಾರ್ಯದರ್ಶಿಗಳು–2, ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು.
4. ಜೆಎಸ್‌ಎಸ್ ಮಹಾವಿದ್ಯಾಪೀಠದ ಎಲ್ಲಾ ವಿಭಾಗಗಳ ನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ.
5. ಸಲಹೆಗಾರರು, ತಾಂತ್ರಿಕ ಶಿಕ್ಷಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು.
6. ರಿಜಿಸ್ಟ್ರಾರ್, ಜೆಎಸ್‌ಎಸ್ ಎಎಚ್‌ಇಆರ್, ಮೈಸೂರು.
7. ರಿಜಿಸ್ಟ್ರಾರ್, ಜೆಎಸ್‌ಎಸ್ ವಿಜ್ಞಾನ & ತಂತ್ರಜ್ಞಾನ ವಿಶ್ವವಿದ್ಯಾನಿಲಯ, ಮೈಸೂರು.
8. ವ್ಯವಸ್ಥಾಪಕರು, ಶ್ರೀ ಸುತ್ತೂರು ಮಠ, ಮೈಸೂರು ಶಾಖೆ, ಮೈಸೂರು.
9. ಜೆಎಸ್‌ಎಸ್ ಇಎಫ್‌ಪಿಎಲ್, ಮೈಸೂರು.
10. ಕಂಪೆಂಡಿಯಮ್ ಪ್ರತಿ.

Scanned with CamScanner

Scanned by CamScanner